

## ತುಸು ನಿಧಾನ...

ಹಗುರ ಹೆಜ್ಜೆಗಳ ಮಧುರ ಹಾಡಿಗೆ
ನಗರದ ಬೀದಿ ಬೆಚ್ಚಗೆ ಮಲಗಿದೆ
ಅನ್ನ ಅರಸಿ ಹೊರಟ ಮರಿ ಬಾತುಗಳ
ಮೆರವಣಿಗೆ ನಮಗೆ ಶಿಸ್ತಿನ ಪಾಠ...

ಇಲ್ಲಿ ಎಲ್ಲ ನಿಮಿತ್ತ ಮಾತ್ರ ಎಂದರೂ
ಅನ್ನಕ್ಕಾಗಿ ಹೆಜ್ಜೆ ಹಾಕದೇ ಗತಿ ಇಲ್ಲ
ಒಮ್ಮೊಮ್ಮೆ ನಮ್ಮ ದೃಷ್ಟಿಯನ್ನು
ಯಾವುದೋ ಸೆಳೆದು ಬಿಡುತ್ತದೆ...

ನಿಯತ್ತು ಇರಬೇಕು ಯಾವತ್ತೂ
ದಕ್ಕಿಸಿಕೊಳ್ಳಲು ಉದರಕ್ಕಿಷ್ಟು ತುತ್ತು
ಹೊತ್ತು ನಿಲ್ಲುವುದಲ್ಲ ಎಂಬ ಅರಿವು
ಕೈ ಗಡಿಯಾರ ತಡವರಿಸದೇ ಸಾರುತ್ತಿದೆ...

ಗದ್ದಲು ಗೋಜುಗಳ ನಡುವೆಯೇ
ಬದುಕು ಗರಿಗೆದರಬೇಕು;
ನಗರದ ಬದುಕೇ ಕರಾಳ;
ಊರಾಚೆ ನಿರಾಳ;
ಪಯಣ ಆಗದಿರಲಿ ಹೈರಾಣ.

**ಶಿ.ಕಾ. ಬಡಿಗೇರ**

## ಅವನಾಣತಿ

ಕೋಳಿಯ ಮರಿಗಳ ಮುಂದೆಯೆ ನಡೆಸುತ
ಕೋಲನು ತೋರಿಸಿ ಓಡಿಸುತ
ಪೀಂ ಪೀಂ ಸದ್ದಲ್ಲಿ ಶಿಸ್ತಲಿ ಹೋಗುತ
ಕುಳುಕುಳು ಹೆಜ್ಜೆಯ ಮುನ್ನಡೆತ

ನಾಯಕನಾಣತಿ ಪಾಲಿಸಿದವುಗಳು
ಗಾಯವು ಆಗದೆ ದಾರಿಯಲಿ
ಹೀಗೆಯೆ ಬಂದರೆ ಗಮ್ಯವ ತಲುಪುವ
ಮಾರ್ಗವ ತೋರುವ ನೇತಾರ

ಸುಲಲಿತ ಜೀವನ ಕಾಯುತ ನೋಡುವ
ಜಾಗ್ರತೆ ವಹಿಸುವ ಯಜಮಾನ.
ವಾಹನ ಇದ್ದರು ಹಾರ್ನಿನ ಶಬ್ದವು
ವಿಚಲಿತವಾಗದು ತಂಡದಲಿ.

ನಮ್ಮದೆ ದಾರಿಯ ನಡೆಯಲಿ ಸರಿಯಿರೆ
ದೇವರ ಕೃಪೆಯು ದೊರೆಯುವುದು.
ಅವನೇ ನಾಯಕ ನಾವಿಕ ನೀರಿಗೆ
ಬಾಳಿನ ದೋಣಿಯ ನಡೆಸುವನು

**ಕೆ.ಎನ್. ರೀನಾ**